# ನ್ಯಾನ್ಸಿ ಹೇಳುವ ಕಥೆ ಮುಗಿಯಿತು! ಮುಂದೆ?

ರೇಚಲ್, ಜಾರ್ಜ್, ಜೋಶುಆ ಎಲ್ಲರೂ ನನಗೆ ಆರ್ಥಿವಾಗಿ ಸಹಾಯ ಮಾಡಿದ್ದರು. ನನ್ನ ಗೆಳತಿ ಡೇನಿಯೇಲಾ ಸಹ ಪಾರ್ಲರ್ ಆರಂಭಿಸಲು ಇಪ್ಪತ್ತು ಸಾವಿರ ಕ್ರೋನರ್ ಸಾಲ ಕೊಟ್ಟಿದ್ದಳು. ಅವರೆಲ್ಲರೂ ನನ್ನ ಒಳಿತನ್ನು ಬಯಸುತ್ತಾರೆ. ನಾನು ನನ್ನ ಕಾಲ ಮೇಲೆ ನಿಲ್ಲುವುದನ್ನು ನೋಡಲು ಬಯಸುತ್ತಾರೆ. ಅವರು ನನ್ನ ಶುಭಚಿಂತಕರು. ಆದರೆ ಈ ಮನುಷ್ಯ... ಇವನು ಸದಾ ನಾನು ನಾಶವಾಗುವುದನ್ನು ಬಯಸಿದ. ನಾನು ಮುಂದುವರೆಯುವುದನ್ನು ನೋಡಲಾರ. ಇವನು ಸದಾ ನನ್ನ ಅಹಿತವನ್ನೇ ಬಯಸಿದ, ಬಯಸುತ್ತಿದ್ದಾನೆ.

ನಾನೆಷ್ಟೇ ಸಂಯಮದಿಂದ ವರ್ತಿಸಿದ್ದಾಗ್ಯೂ, ಅವನು ನಿರಂತರವಾಗಿ ಅಸಂಬದ್ಧವಾಗಿ ವರ್ತಿಸುತ್ತಿದ್ದ. ಈ ಹಿಂದೆ ಅನೇಕ ಬಾರಿ ಹೇಳಿದ ಕಹಿ ಮಾತುಗಳನ್ನೇ ಇಂದೂ ಪುನರುಚ್ಚರಿಸುತ್ತಿದ್ದ. ನಾನು ಅವನನ್ನು ತುಂಬಾ ಸಹಿಸಿದೆ, ಆದರೆ ಅವನ ಹುಚ್ಚಾಟ ನಿಲ್ಲದಿದ್ದಾಗ ನಾನು ವಿಧಿಯಿಲ್ಲದೆ ಅವನನ್ನು ಪಾರ್ಲರ್‌ನಿಂದ ಹೊರದಬ್ಬಲು, 'ಗೆಟ್ ಔಟ್ ಫ್ರಮ್ ಹಿಯರ್...' ಎಂದು ಹೇಳಬೇಕಾಯಿತು.

'ಯೂ ಗೆಟ್ ಔಟ್ ಫ್ರಮ್ ಮೈ ಹೋಮ್...' ಅವನು ಗದರಿಸಿದ.

ನಿಜ ಹೇಳಬೇಕೆಂದರೆ ಅವನ ಹುಚ್ಚುತನಕ್ಕೆ ಬೇರೆಯದೇ ಕಾರಣವಿತ್ತು. ನಾನು ಅವನು ಖರೀದಿಸಿದ ಮನೆಯಲ್ಲಿದ್ದೇನೆ, ಆದರೆ ತಾನು ಮನೆಯಿಂದ ಹೊರ ಹೋಗಬೇಕಾಯಿತು, ಒಂದು ಸಣ್ಣ ಫ್ಲಾಟ್‌ನಲ್ಲಿ ತಾನಿರಬೇಕಾಯಿತು, ನಾನು ಒಂದು ದೊಡ್ಡ ಮನೆಯಲ್ಲಿ ಒಂಟಿಯಾಗಿ ಮಜಾ ಮಾಡುತ್ತಿದ್ದೇನೆ ಎಂಬುದು ಅವನ ಕೋಪಕ್ಕೆ ಕಾರಣವಾಗಿತ್ತು.

'ಈಗ ನೀನು ಇನ್ನಷ್ಟು ಸೊಕ್ಕಿದ್ದೀಯ, ಅಲೆಮಾರಿಯಾಗಿದ್ದೀಯ. ನೀಲ್ ಸಹ ನಿನ್ನ ಜೊತೆಯಲ್ಲಿ ಇಲ್ಲ.'

'ನೀಲ್ ತನ್ನಿಚ್ಛೆಯಂತೆ ನಿನ್ನ ಬಳಿಗೆ ಹೋಗಿದ್ದಾನೆ. ನಾನು ಅವನನ್ನು ಕಳುಹಿಸಿಲ್ಲ. ಅವನಿಗೆ ಬೇಕೆನಿಸಿದಾಗ ಇಲ್ಲಿಗೆ ಬರಲು ನನ್ನ ಅಭ್ಯಂತರವಿಲ್ಲ. ನಾನು ಅವನನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ.'

'ಅವನೇಕೆ ನಿನ್ನಲ್ಲಿಂದ ನನ್ನ ಬಳಿಗೆ ಬಂದ?'

'ಈ ಪ್ರಶ್ನೆಯನ್ನು ನೀನು ಅವನಿಗೇ ಕೇಳು' ನಾನು ಬೇಸರದಿಂದ ಹೇಳಿದೆ.

'ನಾನು ಅವನನ್ನು ಕೇಳಿದೆ... ನೀನು ಅವನ ಬಟ್ಟೆಗಳನ್ನೂ ಸ್ವಚ್ಛ ಮಾಡುವುದಿಲ್ಲ. ಅವನಿಗೆ ಅಡುಗೆ ಮಾಡುವುದಿಲ್ಲ. ಊಟವನ್ನು ಹೊಟೇಲ್‌ನಿಂದಲೂ ತರಿಸುವುದಿಲ್ಲ. ಅವನ ಕೈಗೆ ಐವತ್ತು, ನೂರು ಕ್ರೋನರ್ ಹಾಕಿ, ಪಿಜೇರಿಯಾದಿಂದ ಪಿಜ್ಜಾ ಕೊಳ್ಳಲು ಹೇಳ್ತೀಯ, ಹೀಗಿರುವಾಗ ಅವನು ನಿನ್ನೊಂದಿಗೆ ಹೇಗಿರುತ್ತಾನೆ?'

'ಇದನ್ನೆಲ್ಲಾ ನೀಲ್ ನಿನಗೆ ಹೇಳಿದನೇ?' ನನಗೆ ಆಶ್ಚರ್ಯವಾಯಿತು.

'ಹೌದು, ಅವನೇ ನನಗಿದೆಲ್ಲವನ್ನೂ ಹೇಳಿದ'

'ಮಾರ್ಕೋ, ನಾನೊಬ್ಬಳು ಒಳ್ಳೆಯ ಕುಕ್ ಅನ್ನೋದು ನಿನಗೆ ಗೊತ್ತಿದೆ. ನನಗೆ ಅಡುಗೆ ಮಾಡುವ ಬಗ್ಗೆ ತುಂಬಾ ಆಸಕ್ತಿಯಿದೆ. ನಾನೆಲ್ಲಿಗಾದರೂ ಹೋಗಬೇಕಾದಾಗ ಮಾತ್ರ ಅವನಿಗೆ ಊಟವನ್ನು ತರಿಸಿಕೊಳ್ಳಲು ಹೇಳ್ತೀನಿ.'

'ನೀನು ಸಾಮಾನ್ಯವಾಗಿ ಎಲ್ಲಿಗಾದರೂ ಹೋಗಬೇಕಾಗುತ್ತದೆ...' ಅವನು ವ್ಯಂಗ್ಯವಾಡಿದ.

'ಇಲ್ಲ, ಹಾಗೇನಿಲ್ಲ. ಎಲ್ಲೋ ಒಮ್ಮೊಮ್ಮೆ ಹೀಗಾಗುತ್ತಿತ್ತು; ನನಗೆ ಪಾರ್ಲರ್‌ನಲ್ಲಿ ಕೆಲಸವಿದ್ದಾಗ ಅಥವಾ ನನ್ನ ಸ್ನೇಹಿತೆಯರನ್ನು ಭೇಟಿ ಮಾಡಬೇಕೆಂದಿರುವಾಗ ಹೀಗಾಗುತ್ತದೆ. ನಾನು ಇಪ್ಪತ್ತನಾಲ್ಕು ಗಂಟೆಯಂತೂ ಮನೆಯಲ್ಲಿ ಕೂರಲಾರೆ. ಅವನಿಗೂ ನನ್ನೊಂದಿಗೆ ಬರುವಂತೆ ಹೇಳ್ತೀನಿ. ಆದರೆ ಅವನು ಒಪ್ಪಲ್ಲ. ಎಷ್ಟಾದರೂ ದೊಡ್ಡವನಾಗುತ್ತಿದ್ದಾನಲ್ಲ... ಈಗ ಅವನಿಗೆ ಸದಾ ಅಮ್ಮನ ಜೊತೆಯಲ್ಲಿರುವುದು ಸರಿಯೆನಿಸುವುದಿಲ್ಲ. ಇನ್ನು, ಅವನನ್ನು ದುಡ್ಡು

